ನಗರಪಾಲಿಕೆಯು ಆಸ್ತಿಯಾಗಿರುತ್ತದೆ. ಈ ನಿವೇಶನದಲ್ಲಿ ಕೇವಲ 200 ಮೀಟರ್ ಉದ್ದದ ಓಟದ ಟ್ರ್ಯಾಕ್ ಸಿದ್ಧಪಡಿಸಬಹುದಾಗಿರುತ್ತದೆ. ಈ ಯೋಜನೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಾರ್ಯಗತಗೊಳಿಸಬೇಕಾಗಿದೆ.

ಭಾರತ ಸರ್ಕಾರದ ಯೋಜನೆಯನ್ವಯ 200 ಮೀಟರ್ ಟ್ರ್ಯಾಕ್ ಮಾಡಬಹುದಾದ ಸ್ಟೇಡಿಯಂಗೆ ಗರಿಷ್ಠ 6 ಲಕ್ಷ ರೂಪಾಯಿಗಳ ಧನಸಹಾಯ ದೊರೆಯಲಿದೆ. ಬೆಂಗಳೂರು ನಗರಪಾಲಿಕೆಯಿಂದ ಸೂಕ್ತವಾದ ಪ್ರಸ್ತಾವನೆ ಬಂದಲ್ಲಿ ಧನ ಸಹಾಯಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ.

4. ರೇಷ್ಮೆಬೆಳೆಗಾರರಿಗೆ ವಿಮಾ ಸೌಲಭ್ಯ ಜಾರಿ

ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರೇಷ್ಮೆ ಸಚಿವರಿಂದ ಕೆಳಗಿನ ಸಲಹೆಗಳ ಬಗ್ಗೆ ಸೂಕ್ತ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತೇನೆ.

1) ರೈತನ ಹತೋಟಿಯಲ್ಲಿರದ ಕಾರಣಗಳಿಂದ ಬೆಳೆಗಳು ಹಾಳಾಗುತ್ತವೆ. ಆದ್ದರಿಂದ ರೇಷ್ಮೆ ಬೆಳೆಗಾರರಿಗೆ ಪೂರ್ಣ ವಿಮಾ ಯೋಜನೆಯನ್ನು ಜಾರಿಗೆ ತರಬೇಕು.

2) ಹಳೇ ಮೈಸೂರು ಪ್ರಾಂತ್ಯದಲ್ಲಿರುವ ರೇಷ್ಮೆಗೂಡು ಮಾರುಕಟ್ಟೆಗಳಲ್ಲಿ ಸರ್ಕಾರಿ ಉದ್ದಿಮೆಗಳಿಗಾಗಿ ಗೂಡನ್ನು ಖರೀದಿಸುವ ವ್ಯವಸ್ಥೆ ಇದೆ. ಆದರೆ ಈ ಸೌಲಭ್ಯ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿರುವುದಿಲ್ಲ. ಉತ್ತರ ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ ಈ ಉದ್ದಿಮೆಗಳಿಗಾಗಿ ಗೂಡನ್ನು ಖರೀದಿಸುವ ಕೇಂದ್ರಗಳನ್ನು ಸ್ಥಾಪಿಸಬೇಕು.

3) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಸೌಲಭ್ಯ ಹಾಗೂ ಪ್ರೋತ್ಸಾಹ ಧನ ಇದ್ದಂತೆ ಹಿಪ್ಪುನೇರಳೆ ಬೇಸಾಯಕ್ಕೂ ಕೂಡ ಈ ಸೌಲಭ್ಯವನ್ನು ವಿಸ್ತರಿಸಬೇಕು. ನೀರಿನ ಅಭಾವದಿಂದ ಈ ಸೌಲಭ್ಯ ತೀರಾ ಅವಶ್ಯವಾಗಿದೆ. ಬ್ಯಾಂಕಿನಿಂದ ಸಾಲ ಪಡೆಯದೆಯೂ ಕೂಡ ಹನಿ ನೀರಾವರಿ ಅಳವಡಿಸಿದರೆ ಪ್ರತಿಶತ 50 ಸಹಾಯಧನ ಪಡೆಯಲು ಅರ್ಹತೆ ಕೊಡಬೇಕು.

4) ರಾಸಾಯನಿಕ ಕೃಷಿಯಿಂದ ಮಣ್ಣಿನ ಫಲವತ್ತತೆ ಹಾಗೂ ಗುಣಮಟ್ಟ ಕಳಪೆಯಾಗುತ್ತಿರುವುದು ಕಂಡುಬಂದಿದೆ. ಆದ್ದರಿಂದ ಸಂಪೂರ್ಣ ಸಾವಯವ ರೀತಿಯಲ್ಲಿ ಹಿಪ್ಪುನೇರಳೆ ಬೇಸಾಯವನ್ನು ಮಾಡುವ ತಾಂತ್ರಿಕತೆಯ ಬಗ್ಗೆ ಸಂಶೋಧನೆ ಮಾಡಿ ಅಭಿವೃದ್ಧಿಪಡಿಸಿ ರೈತರಿಗೆ ಒದಗಿಸಬೇಕು.

ಡಾ. ಜಿ. ಪರಮೇಶ್ವರ (ರೇಷ್ಮೆ ಸಚಿವರು):– ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆ ನೀಡ ಬಯಸುತ್ತೇನೆ.

ಕೆಲವೊಂದು ಸಾರಿ ವಾತಾವರಣದ ವೈಪರೀತ್ಯಗಳಿಂದ ರೈತರು ಎಷ್ಟೇ ಹತೋಟಿ ಕ್ರಮ ತೆಗೆದುಕೊಂಡರೂ ಸಹ ಬೆಳೆಗಳು ಭಾಗಶಃ ಎಲ್ಲೋ ಒಂದೊಂದು ಸಾರಿ ಪೂರ್ಣ ಹಾಳಾಗುತ್ತವೆ. ರೇಷ್ಮೆ ಬೆಳೆಗಾರರಿಗೆ ಪೂರ್ಣ ವಿಮಾ ಯೋಜನೆಯನ್ನು ತರುವ ಬಗ್ಗೆ ಸಂಬಂಧಪಟ್ಟ ವಿಮಾ ಕಂಪನಿಯವರ ಜೊತೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹಳೆಯ ಮೈಸೂರು ಪ್ರದೇಶದಲ್ಲಿರುವ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ವ್ಯವಹಾರವಾಗತಕ್ಕಂತ ಒಟ್ಟು ಮೊತ್ತ ಗೂಡಿನಲ್ಲಿ ಶೇಕಡ 3ರಿಂದ 4ರಷ್ಟನ್ನು ಮಾತ್ರ ಸರ್ಕಾರಿ ಉದ್ಯಮಗಳು ಖರೀದಿಸುತ್ತಿವೆ. ಆದರೆ ಎಲ್ಲಾ ಮಾರುಕಟ್ಟೆಗಳಲ್ಲಿ ಖರೀದಿಸುತ್ತಾ ಇಲ್ಲ. ಖರೀದಿಸತಕ್ಕಂಥ ಪ್ರಮುಖ ಮಾರುಕಟ್ಟೆಗಳೆಂದರೆ, ಕೊಳ್ಳೇಗಾಲ, ಸಂತೇಮಾರನಹಳ್ಳಿ, ರಾಮನಗರ, ವಿಜಯಪುರ, ಶಿಡ್ಲಘಟ್ಟ, ಕನಕಪುರ, ಉತ್ತರ ಕರ್ನಾಟಕದಲ್ಲಿ ಕೆ.ಎಸ್.ಐ.ಸಿ. ಮತ್ತು ತೋಳಹುಣಸೆಯಲ್ಲಿ ಸ್ಥಾಪಿಸಿರುವ ಸರ್ಕಾರಿ

ರೇಷ್ಮೆ ಕಾರ್ಖಾನೆ ಶಿರಸಿ ಮತ್ತು ಬೆಳಗಾಂ ಮಾರುಕಟ್ಟೆಯಲ್ಲಿ ಗೂಡನ್ನು ಕೊಂಡುಕೊಳ್ಳುತ್ತಿದೆ. ಇತರ ಪ್ರಮುಖ ಮಾರುಕಟ್ಟೆಗಳಲ್ಲಿ ಗೂಡನ್ನು ಸರ್ಕಾರಿ ಉದ್ಯಮಗಳು ಖರೀದಿಸುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಅವಶ್ಯಕತೆ ಕಂಡುಬಂದ ಸ್ಥಳಗಳಲ್ಲಿ ಮಾರುಕಟ್ಟೆ ಸ್ಥಾಪಿಸಲಾಗುವುದು.

ಮಾನ್ಯ ಸದಸ್ಯರು ಮಾಡಿದ ಸಲಹೆಯು ಬಹಳ ಉತ್ತಮವಾಗಿದೆ. ಹಿಪ್ಪುನೇರಳೆ ವ್ಯವಸಾಯಕ್ಕೆ ಯಾವ ರೀತಿ ಹನಿ ನೀರಾವರಿ ಅಳವಡಿಸಿಕೊಳ್ಳಬೇಕೆನ್ನುವ ಬಗ್ಗೆ ಮೊದಲು ಸರ್ಕಾರಿ ರೇಷ್ಮೆ ಕೃಷಿ ತೋಟಗಳಲ್ಲಿ ಪ್ರಾಯೋಗಿಕವಾಗಿ ಅಳವಡಿಸಿಕೊಂಡು ಪರಿಶೀಲಿಸಿ ತದನಂತರ ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದು. ಹನಿ ನೀರಾವರಿ ಸೌಲಭ್ಯಕ್ಕೆ ಕೇಂದ್ರ ಸರ್ಕಾರದಿಂದ ತೋಟಗಾರಿಕೆ ಹಾಗೂ ಕೃಷಿ ಇಲಾಖೆಗೆ ದೊರೆಯತಕ್ಕಂಥ ಸೌಲಭ್ಯಗಳ ವಿವರಗಳನ್ನು ಪಡೆದುಕೊಂಡು ಹಿಪ್ಪುನೇರಳೆ ವ್ಯವಸಾಯಕ್ಕೂ ಕೂಡ ಕೇಂದ್ರ ಸರ್ಕಾರದಿಂದ ಹನಿ ನೀರಾವರಿ ಸೌಲಭ್ಯ ಒದಗಿಸಲು ಸಹಾಯ ಧನ ಕೊಡುವಂತೆ ಕೇಳಲಾಗುವುದು. ಅದುವರೆಗೆ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದಿಂದ (ಪಿ.ಎಸ್.ಎಫ್.ಎ) ಹನಿ ನೀರಾವರಿ ಸೌಲಭ್ಯ ಹೊಂದಿದವರಿಗೆ ಶೇಕಡ 10ರಷ್ಟು ಸಹಾಯಧನ ಕೊಡುವ ಬಗ್ಗೆ ಪರಿಶೀಲನೆಯಲ್ಲಿದೆ. ಬ್ಯಾಂಕ್‌ನಿಂದ ಸಾಲ ಪಡೆಯದೆ ಹನಿ ನೀರಾವರಿ ಅಳವಡಿಸಿಕೊಂಡವರಿಗೂ ಕೂಡ ಸಹಾಯಧನ ಕೊಡುವ ಬಗ್ಗೆ ಪರಿಶೀಲಿಸಲಾಗುವುದು.

ಸರ್ಕಾರವು, ಕರ್ನಾಟಕ ರೇಷ್ಮೆ ಕೃಷಿ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿದೆ. ಇದಲ್ಲದೆ ಕೃಷಿ ವಿಶ್ವವಿದ್ಯಾನಿಲಯದಲ್ಲೂ ಕೂಡ ಸಂಶೋಧನೆ ನಡೆಯುತ್ತಿದೆ. ಇಲ್ಲಿ ಸಂಪೂರ್ಣ ಸಾವಯವ ಗೊಬ್ಬರ ಬಳಕೆಯಿಂದಲೇ ಹಿಪ್ಪುನೇರಳೆ ಬೇಸಾಯ ಮಾಡುವ ತಾಂತ್ರಿಕತೆ ಬಗ್ಗೆ ಸಂಶೋಧನೆ ಕಾರ್ಯ ಕೈಗೊಳ್ಳಲು ಕೇಳಿಕೊಳ್ಳಲಾಗುವುದು.

5. ಬೆಳಗಾಂನ ಕೃಷಿ ಭವನದ ಅಕ್ರಮ ಉಪಯೋಗ

SRI SUBHASH JOSHI (NIPPANI):- Mr. Speaker Sir, Whether it has come to the notice of the Government that Krishi Bhavan at Belgaum is occupied by Apolo Lodge and Bar since long. I request the Hon'ble Agriculture Minister to vacate the Lodge and Bar and use it as a Krishi Bhavan.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ವಿಚಾರದಲ್ಲಿ ಈ ಕೆಳಕಂಡ ಹೇಳಿಕೆ ಕೊಡಬಯಸುತ್ತೇನೆ.

ಬೆಳಗಾಂನ ಬಸ್ ನಿಲ್ದಾಣದ ಸಮೀಪದಲ್ಲಿರುವ ವಿಭಾಗೀಯ ಅರಣ್ಯ ಅಧಿಕಾರಿಯವರ ಆವರಣದಲ್ಲಿರುವ ನಿವೇಶನದ ಪೈಕಿ 34.24 ಗುಂಟೆಗಳಷ್ಟು ವಿಸ್ತೀರ್ಣವುಳ್ಳ ಪ್ರದೇಶವನ್ನು ವಕೀಲರಾದ ಶ್ರೀ ಎನ್.ಎ. ಹನುಮಣ್ಣನವರಿಗೆ ಮಾಸಿಕ ರೂ. 86-00 ರಂತೆ ಬಾಡಿಗೆ ಮೇರೆಗೆ 99 ವರ್ಷಗಳ ಕಾಲ ಗುತ್ತಿಗೆಯಾಗಿ ಸರ್ಕಾರಿ ಆದೇಶ ಸಂಖ್ಯೆ :ಎಎಫ್‌ಡಿ :31:ಎಫ್‌ಜಿಎಲ್: 61 ಜನವರಿ 67 ರಲ್ಲಿ ನೀಡಲಾಯಿತು. ಈ ಗುತ್ತಿಗೆದಾರರು ನೀಡಿರುವ ನಿವೇಶನವನ್ನು ಈ ಕೆಳಕಂಡ ಉಪಯೋಗಕ್ಕಾಗಿ ಉಪಯೋಗಿಸತಕ್ಕದೆಂದು ಷರತ್ತು ಹಾಕಲಾಗಿದೆ. ಇದರ ಪ್ರಕಾರ ಈ ನಿವೇಶನದಲ್ಲಿ ಮಣ್ಣು ಪರೀಕ್ಷಾ ಪ್ರಯೋಗಾಲಯದ ಕಟ್ಟಡ, ಶೈತ್ಯೀಕರಣ ಕಟ್ಟಡ, ವಿಶ್ರಾಂತಿ ಗೃಹ ಮುಂತಾದುವುಗಳು ನಿರ್ಮಿಸಬೇಕೆಂದು ಗುತ್ತಿಗೆದಾರರಿಗೆ ತಿಳಿಸಲಾಗಿತ್ತು. ಆದರೆ ಗುತ್ತಿಗೆದಾರರು ಈ ನಿಯಮವನ್ನು ಉಲ್ಲಂಘಿಸಿ ಈ ಜಾಗದಲ್ಲಿ ಬಾರ್, ಉಪಹಾರ ಗೃಹ, ವಸತಿ ಗೃಹ ಮತ್ತು ಪ್ರವಾಸೋದ್ಯಮ ಕಛೇರಿಗಳನ್ನು ನಡೆಸುತ್ತಿದ್ದಾರೆಂದು ವರದಿಯಾಗಿದೆ. ಈ ಜಾಗವನ್ನು ಗುತ್ತಿಗೆದಾರರಿಗೆ ಯಾವ ಉದ್ದೇಶಕ್ಕಾಗಿ ಅಂದರೆ ರೈತರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು